



# ಪಾದದ ಅಂದಕ್ಕೆ ಕಾಲುಂಗುರ

ಕಾಲುಂಗುರ ಧರಿಸುವುದು ಸಂಪ್ರದಾಯ ಎಂಬ ಕಾಲ ಹಿಂದೆ ಇತ್ತು. ಆದರೆ ಈಗ ಇಲ್ಲಿಗೂ ಫ್ಯಾಷನ್ ಬಂದಿದ್ದು, ಹಲವು ವಿನ್ಯಾಸಗಳ ವೈವಿಧ್ಯಮಯ ಕಾಲುಂಗುರಗಳನ್ನು ಮಹಿಳೆಯರು ಧರಿಸುವುದು ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

■ ಪದ್ಮಜಾ ಸುಂದರೇಶ್



ಪಾದದ ಬೆರಳುಗಳಿಗೆ ಉಂಗುರ ಧರಿಸುವುದು ಸಾಂಪ್ರದಾಯಿಕ ಹಾಗೂ ಫ್ಯಾಷನ್ ಎರಡೂ ಮನೋಭಾವವನ್ನು ಇಂದು ಬಿಂಬಿಸುತ್ತದೆ. ಅನಾದಿ ಕಾಲದಿಂದಲೂ ವಿವಾಹಿತ ಮಹಿಳೆ ಕಾಲುಗಳ ಬೆರಳುಗಳಿಗೆ ಉಂಗುರ ತೊಡುತ್ತಾ ಬಂದಿದ್ದಾಳೆ. ಮದುವೆಯ ದಿನ ತೊಡುವ ಈ ಬೆಳ್ಳಿ ಕಾಲುಂಗುರ ಪವಿತ್ರ ಭಾವನೆಯನ್ನೂ ಬಿಂಬಿಸುತ್ತದೆ. ಇದೀಗ ಫ್ಯಾಷನ್ ಹಾದಿ ಹಿಡಿದಿದೆ. ಫ್ಯಾಷನೆಬಲ್ ಆಗಿರುವ ಬಣ್ಣಬಣ್ಣದ ಹಾಗೂ ವಿವಿಧ ವಿನ್ಯಾಸಗಳ ಆಕರ್ಷಕ ಕಾಲುಂಗುರಗಳು ಫ್ಯಾಷನ್ ಲೋಕಕ್ಕೆ ಲಗ್ಗೆ ಇಟ್ಟಿದೆ.

ಕಾಲುಗಳಿಗೆ ಸುಂದರ ಗೆಜ್ಜೆಯ ಸಿಂಗಾರವೇ ಇರಲಿ, ಉಗುರುಗಳಿಗೆ ಆಕರ್ಷಕ ಬಣ್ಣಗಳ ಲೇಪನವೇ ಇರಲಿ, ಬೆರಳುಗಳಲ್ಲಿ ಕಾಲುಂಗುರವಿರದಿದ್ದರೆ ಅವುಗಳ ಅಲಂಕಾರ ಪೂರ್ತಿಯಾಗುವುದಿಲ್ಲ. ಹಿಂದೂ ಸಂಪ್ರದಾಯದ ಪ್ರಕಾರ ಕಾಲುಂಗುರವನ್ನು ವಿವಾಹಿತ ಮಹಿಳೆಯರು ಮಾತ್ರ ಧರಿಸುತ್ತಾರೆ. ಕಾಲುಂಗುರಗಳ ಬಳಕೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಕಾಲುಂಗುರಗಳನ್ನು ಎರಡೂ ಕಾಲುಗಳ ಹೆಬ್ಬೆರಳಿನ ಪಕ್ಕದ ಬೆರಳಿಗೆ ಧರಿಸುವುದು ವಾಡಿಕೆಯಲ್ಲಿದೆ. ಆದರೂ ಒಂದಕ್ಕಿಂತ ಹೆಚ್ಚು ಬೆರಳುಗಳಿಗೆ ಧರಿಸುವವರೂ ಅಪರೂಪವಲ್ಲ.

ಕಾಲುಂಗುರಗಳ ಬಳಕೆ ನಿನ್ನೆ ಮೊನ್ನೆಯದಲ್ಲ. ಅವುಗಳನ್ನು ರಾಮಾಯಣದ ಕಾಲದಿಂದಲೂ ಬಳಸುತ್ತಿದ್ದರು ಎನ್ನಲು ಸಾಕಷ್ಟು ಪುರಾವೆಗಳಿವೆ. ರಾವಣನು ಸೀತೆಯನ್ನು ಅಪಹರಿಸಿ, ತನ್ನ ಪುಷ್ಪಕ ವಿಮಾನದಲ್ಲಿ ಲಂಕೆಗೆ ಕರೆದೊಯ್ಯುತ್ತಿದ್ದಾಗ, ಆಕೆ ತನ್ನ ಕಾಲುಂಗುರಗಳನ್ನು ಇನ್ನಿತರ ಒಡವೆಗಳ ಜೊತೆ ಕೆಳಕ್ಕೆ ಎಸೆದಳೆಂದೂ, ಅವುಗಳನ್ನು ನೋಡಿ ಶ್ರೀರಾಮನು ತನ್ನನ್ನು ಹುಡುಕಿಕೊಂಡು ಬರಲಿ ಎಂದು ಆಶಿಸಿದ್ದಳೆಂದೂ ರಾಮಾಯಣದಿಂದ ತಿಳಿದು ಬರುತ್ತದೆ.

ಬಹಳ ಹಿಂದೆ ಕಾಲುಂಗುರಗಳನ್ನು ಸಾಮಾನ್ಯವಾಗಿ ಬೆಳ್ಳಿ ಅಥವಾ ಇನ್ನಿತರ ಅಗ್ಗದ ಲೋಹಗಳಿಂದ ತಯಾರಿಸುತ್ತಿದ್ದರು. ಚಿನ್ನವು ಒಂದು ಶ್ರೇಷ್ಠ ಲೋಹವಾಗಿದ್ದು ಅದನ್ನು ಸೊಂಟದಿಂದ ಕೆಳಕ್ಕೆ ಬಳಸಬಾರದೆಂಬ ನಂಬಿಕೆ ಇದ್ದಿದ್ದರಿಂದ ಅದರಿಂದ ಕಾಲುಂಗುರಗಳನ್ನು ತಯಾರಿಸುತ್ತಿರಲಿಲ್ಲ. ಆದರೆ ಈಗ